# ಇಂಗ್ಲಿಷ್‌ನೊಂದಿಗೆ ಕನ್ನಡ ಶಿಕ್ಷಣವಿದ್ದರೆ ಕರ್ನಾಟಕದ ಯುವಜನತೆ ಜಾಗತಿಕ ಮಟ್ಟದಲ್ಲಿ ಯಶಸ್ಸು ಸಾಧಿಸಲು ತಯಾರಾಗಬಹುದು

ಕನ್ನಡದೊಂದಿಗೆ ಇಂಗ್ಲಿಷ್ ಶಿಕ್ಷಣವೂ ಇದ್ದರೆ ಉತ್ತಮ ಎಂಬ ನನ್ನ ಅಭಿಪ್ರಾಯವನ್ನು ಕನ್ನಡದ ಬದಲಿಗೆ ಇಂಗ್ಲಿಷ್ ಶಿಕ್ಷಣ ಮಾಧ್ಯಮವನ್ನು ಬೆಂಬಲಿಸುತ್ತಿದ್ದೇನೆ ಎಂಬಂತೆ ಉದ್ದೇಶಪೂರ್ವಕವಾಗಿ ತಪ್ಪಾಗಿ ಅರ್ಥೈಸಿರುವುದು ಒಬ್ಬ ಕನ್ನಡತಿಯಾಗಿ ನನಗೆ ಬಹಳ ನೋವುಂಟು ಮಾಡುತ್ತಿದೆ.

ಇದಕ್ಕಿಂತ ಹೆಚ್ಚಿನ ಸತ್ಯ ಹೇಳಬೇಕಾದ್ದಿಲ್ಲ. ನನ್ನ ಭಾಷೆಯೂ ಸಹ ಕನ್ನಡವೇ ಆಗಿದ್ದು ತಮ್ಮ ಮಾತೃಭಾಷೆಯಲ್ಲಿ ವಿದ್ಯಾರ್ಥಿಗಳು ಹಿಡಿತ ಹೊಂದಿರಬೇಕು ಎಂಬುದನ್ನು ಬಲವಾಗಿ ಬೆಂಬಲಿಸುತ್ತೇನೆ. ಇಷ್ಟು ಮಾತ್ರವಲ್ಲದೆ ನಾನು ಕರ್ನಾಟಕದ ಯುವಜನತೆಯು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ನಾಯಕತ್ವದ ಪಾತ್ರಗಳನ್ನು ನಿಭಾಯಿಸುವುದನ್ನು ನೋಡಬಯಸುತ್ತೇನೆ. ತಮ್ಮ ಮಕ್ಕಳು ಅವರವರ ಸಾಮರ್ಥ್ಯದ ಸಂಪೂರ್ಣ ಮಟ್ಟಕ್ಕೆ ಬೆಳೆಯಬೇಕು ಎಂಬ ಸಾವಿರಾರು ಪೋಷಕರ ಆಶೋತ್ತರಗಳಿಗೆ ಸ್ಪಂದಿಸಬಯಸುತ್ತೇನೆ.

ಇಂದು ಗ್ರಾಮೀಣ ಕರ್ನಾಟಕದ ಪೋಷಕರೂ ಸಹ ಜಾಗತಿಕ ವ್ಯವಸ್ಥೆಯಲ್ಲಿ ಇಂಗ್ಲಿಷ್ ಭಾಷೆಯ ಪ್ರಾಮುಖ್ಯತೆಯನ್ನು ಅರಿತಿದ್ದಾರೆ. ಮುಂದಿನ ದಿನಗಳಲ್ಲಿ ಇಂಗ್ಲಿಷ್ ಭಾಷೆಯ ಪ್ರಾಮುಖ್ಯತೆಯು ಮತ್ತಷ್ಟು ಹೆಚ್ಚುವ ಸಂಭವ ಇರುವುದರಿಂದ ಸ್ಥಳೀಯ ಭಾಷೆಯೊಂದಿಗೆ ಇಂಗ್ಲಿಷ್ ಭಾಷೆಯನ್ನೂ ಸಹ ಸುಲಭವಾಗಿ ಉಪಯೋಗಿಸಲು ನಮ್ಮ ವಿದ್ಯಾರ್ಥಿಗಳನ್ನು ಇಂದು ನಾವು ಸಜ್ಜುಗೊಳಿಸಬೇಕಾಗಿದೆ. ವಿದ್ಯಾರ್ಥಿಗಳ ಹಾಗೂ ಪೋಷಕರ ಈ ಆಶೋತ್ತರಗಳಿಗೆ ನಾವು ಅವಕಾಶ ನೀಡದಿದ್ದರೆ ಅವರನ್ನು ನಾವು ವಂಚಿಸಿದಂತಾಗುತ್ತದೆ. ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿಯವರು ಕರ್ನಾಟಕದ ಯುವಜನತೆಯ ಆಶೋತ್ತರಗಳನ್ನು ಅರ್ಥ ಮಾಡಿಕೊಂಡಿದ್ದಾರೆ. ಕನ್ನಡ ಭಾಷೆಯ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭಿಸಬೇಕೆಂಬುವ ಅವರ ಪ್ರಸ್ತಾವನೆಯ ಹಿಂದೆ ಕರ್ನಾಟಕದ ಯುವಜನತೆಗೆ ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡಲು ಬೇಕಾಗುವ ಸಾಮರ್ಥ್ಯ ದೊರೆಯುವಂತೆ ಮಾಡುವ ಅವಕಾಶ ನೀಡಿ ಅದರೊಂದಿಗೆ ತಮ್ಮ ಹಾಗೂ ತಮ್ಮ ದೇಶವಾಸಿಗಳ ಬದುಕನ್ನು ಉತ್ತಮಗೊಳಿಸಬೇಕೆಂಬ ಉನ್ನತ ಉದ್ದೇಶವಿದೆ.

## ಕನ್ನಡ ಶಾಲೆಗಳನ್ನು ಮುಚ್ಚುವುದನ್ನು ತಡೆಗಟ್ಟಿ

ಉನ್ನತ ಶಿಕ್ಷಣ ಹಾಗೂ ನೌಕರಿಯ ಅವಕಾಶಗಳ ವಿಷಯಕ್ಕೆ ಬಂದಾಗ ಕೇವಲ ಸ್ಥಳೀಯ ಭಾಷೆಯಲ್ಲಿ ಕಲಿತ ವಿದ್ಯಾರ್ಥಿಗಳ ಖಂಡಿತವಾಗಿಯೂ ಅನಾನುಕೂಲ ಉಂಟಾಗುತ್ತದೆ. ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ವಿಜ್ಞಾನ ಕಲಿಕೆಗಳಿಗೆ ಅಗತ್ಯವಿರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಂಗ್ಲಿಷ್ ಮೇಲಿನ ಉತ್ತಮ ಹಿಡಿತ ಅಗತ್ಯವಿರುತ್ತದೆ. ಪ್ರಸ್ತುತ ಅರ್ಧವಾರ್ಷಿಕ ಪರೀಕ್ಷೆಗಳಿರುವ ಪದ್ಧತಿಗಳಲ್ಲಿ ಕಾಲೇಜಿಗೆ ದಾಖಲಾತಿಯಾದ ಕೆಲವೇ ತಿಂಗಳುಗಳಲ್ಲಿ ವಿದ್ಯಾರ್ಥಿಯು ಇಂಗ್ಲಿಷಿನಲ್ಲಿ ಪರೀಕ್ಷೆ ಬರೆಯಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಭಾಷೆಯೊಂದಿಗೆ ಇಂಗ್ಲಿಷ್ ಸಹ ತಿಳಿದಿದ್ದವರಿಗೆ ಇಂತಹ ಪರಿಸ್ಥಿತಿ ಎದುರಿಸುವುದು ಸುಲಭವಾಗುತ್ತದೆ.

ಇಂದು ಪೋಷಕರು ಸ್ಥಳೀಯ ಭಾಷೆಯಲ್ಲಿ  ಮಾತ್ರ ಪಾಠ ಮಾಡುವ ಶಾಲೆಗಳಿಗೆ ಮಕ್ಕಳನ್ನು ಕಳುಹಿಸದೇ ಇರುವುದನ್ನು ನಾವು ಗಮನಿಸಬಹುದು ಹಾಗೂ ಇದರಿಂದಾಗಿ ಇಂತಹ ಶಾಲೆಗಳು ಮುಚ್ಚಿಹೋಗುತ್ತಿವೆ. ಕನ್ನಡ ಮಾಧ್ಯಮದ ಅತ್ಯಂತ ಹಳೆಯ ಶಾಲೆಯಾದ 1870ರಲ್ಲಿ ಆರಂಭವಾದ ಚಾಮರಾಜಪೇಟೆಯ ಮಾಡಲ್ ಶಾಲೆಯು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಕೊರತೆಯಿಂದಾಗಿ ಮುಚ್ಚಲ್ಪಟ್ಟಿರುವುದನ್ನು ನಾವು ಕಾಣಬಹುದು.

ಇದಕ್ಕೆ ಮುಂಚೆಯೂ ಸಹ 18 ಶಾಲೆಗಳು ಹಾಗೂ ಅದಕ್ಕೂ ಮುನ್ನ 2017ರ ಅಕ್ಟೋಬರಿನಲ್ಲಿ 10 ಶಾಲೆಗಳು ಮುಚ್ಚುವಂತೆ ಆಗಿರುವ ಆದೇಶಗಳನ್ನು ನಾವು ಇಂಡಿಯನ್ ಎಕ್ಸ್‌ಪ್ರೆಸ್ ವರದಿಯಿಂದ ತಿಳಿದುಕೊಳ್ಳಬಹುದು. ಇಂಗ್ಲಿಷ್ ಹಾಗೂ ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡಿದರೆ ಮಾತ್ರ ಇಂತಹ ಶಾಲೆಗಳು ಮುಚ್ಚಿಹೋಗುವುದನ್ನು ತಡೆಗಟ್ಟಬಹುದು.

## ಇಂಗ್ಲಿಷ್ ಭಾಷೆಯಲ್ಲಿ ಹಿಡಿತ ಹೊಂದಿರುವುದು ಅತ್ಯಗತ್ಯ

ಜಾಗತಿಕವಾಗಿ ಏನಾಗುತ್ತದೆ ಎಂಬುದನ್ನು ನಾವು ತಿಳಿಯಬೇಕಾಗುತ್ತದೆ. ಜ್ಞಾನ ಅರ್ಥವ್ಯವಸ್ಥೆಯಲ್ಲಿ ಅಗತ್ಯವಿರುವ ಇಂಗ್ಲಿಷ್ ಭಾಷೆಯ ಮೇಲಿನ ಹಿಡಿತ ಸಾಧಿಸಲು ಚೀನಾ, ಕೊರಿಯ ಹಾಗೂ ಜಪಾನ್ ದೇಶದ ವಿದ್ಯಾರ್ಥಿಗಳು ಮುನ್ನುಗ್ಗುತ್ತಿದ್ದಾರೆ. ಯುರೋಪಿಯನ್ ಯೂನಿಯನ್ನಿನ ಹಲವು ದೇಶಗಳಲ್ಲಿ ಇಂದು ಇಂಗ್ಲಿಷ್ ಭಾಷೆಯನ್ನು ವಿದೇಶಿ ಭಾಷೆಯಾಗಿ ಕಲಿಯುತ್ತಿದ್ದಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ಇಂದಿನ ದಿನಗಳಲ್ಲಿ ವ್ಯಾಪಾರ, ಸಾಮಾಜಿಕ ಹಾಗೂ ರಾಜತಾಂತ್ರಿಕ ಸಂವಹನಗಳಿಗೆ ಇಂಗ್ಲಿಷ್ ಅತ್ಯಗತ್ಯವಾಗಿದೆ. ಜಾಗತಿಕ ದೃಷ್ಟಿಕೋನದಿಂದ ನೋಡಿದರೆ ಜಗತ್ತಿನಲ್ಲಿ ನಾಲ್ವರಲ್ಲಿ ಒಬ್ಬರು ಇಂಗ್ಲಿಷ್ ಬಳಸುತ್ತಿದ್ದಾರೆ.
ಇಂಗ್ಲಿಷೇತರ ಹಿನ್ನೆಲೆಯಿಂದ ಬಂದರೂ ಹಲವು ಜಾಗತಿಕ ಸಂಸ್ಥೆಗಳ ಮುಖಂಡರು ಇಂಗ್ಲಿಷ್ ಭಾಷೆಯನ್ನು ಬಳಸುತ್ತಿರುವುದು ಆಶ್ಚರ್ಯಕರವೇನಲ್ಲ.

## ಭಾರತೀಯರಿಗೆ ಸ್ವಾಭಾವಿಕ ಅನುಕೂಲತೆಗಳಿದೆ

ನಮ್ಮ ವಸಾಹತು ಹಿನ್ನೆಲೆಯಿಂದ ಗಮನಿಸಿದರೆ ಭಾರತೀಯರಿಗೆ ಇಂಗ್ಲಿಷ್ ಮೇಲಿನ ಹಿಡಿತ ಸ್ವಾಭಾವಿಕವಾಗಿ ಬರಲು ಮುಖ್ಯ ಕಾರಣವೆಂದರೆ ನಮ್ಮ ಪಠ್ಯಕ್ರಮದಲ್ಲಿ ಇಂಗ್ಲಿಷ್ ಸಮಗ್ರವಾಗಿ ಬೆರೆತುಹೋಗಿರುವುದು. ನಮ್ಮ ಸಂವಿಧಾನವೂ ಸಹ ಇಂಗ್ಲಿಷ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ನಮಗಿರುವ ಈ ಅನುಕೂಲತೆಯನ್ನು ನಾವು ಸಮರ್ಥವಾಗಿ ಬಳಸಿಕೊಂಡು ನಮ್ಮ ಮಕ್ಕಳಿಗೆ ಇಂಗ್ಲಿಷ್ ಭಾಷಾ ಕೌಶಲ್ಯ ಒದಗಿಸಿದರೆ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತದೆ. ಇದೇ ಸಮಯದಲ್ಲಿ ನಾವು ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಕರನ್ನು ಇದಕ್ಕೆ ಬೇಕಾದಂತೆ ತಯಾರುಮಾಡಬೇಕಾಗುತ್ತದೆ ಹಾಗೂ ಇಂಗ್ಲಿಷ್ ಸೇರಿದಂತೆ ಸರ್ವಾಂಗೀಣ ಪಠ್ಯಕ್ರಮವೊಂದನ್ನು ರೂಪಿಸಬೇಕಾಗುತ್ತದೆ. ನಗರ ಹಾಗೂ ಗ್ರಾಮೀಣ ಮಕ್ಕಳ, ಇಂಗ್ಲಿಷ್ ಕಲಿಯಬೇಕೆಂಬ ಆಶೋತ್ತರಗಳನ್ನು ನಾವು ಅಲ್ಲಗಳೆದು ಜಾಗತಿಕ ಮಟ್ಟದಲ್ಲಿ ನಮ್ಮ ಮಕ್ಕಳು ಮಹೋನ್ನತ ಸ್ಥಾನಗಳನ್ನು ಪಡೆಯುವುದರಿಂದ ವಂಚಿತರನ್ನಾಗಿ ಮಾಡುವುದು ಸರಿಯಲ್ಲ ಎಂಬುದು ನನ್ನ ಆಶಯ.